ಹಿಂದೆ, ಮತ್ತು ಇಂಥದನ್ನು ನಿತ್ಯನಿರಂತರ ಮಾಡುತ್ತ ಬಂದ ಅವರ ಸಂವೇದನೆ ಮತ್ತು ಸಂಕಲ್ಪದ ಹಿಂದೆ, ಇದ್ದದ್ದು ಆ ಆರ್ದ್ರತೆಯೇ.

ಅವರ ನಿಸ್ಪೃಹ, ಫ್ಯಾಸಿಸ್ಟ್ ವಿರೋಧಿ ಆಕ್ಟಿವಿಸಂನ ಮೂಲವಲ್ಲದೆ, ಅವರ ಸಾಹಿತ್ಯ–ಸಾಂಸ್ಕೃತಿಕವಾದ ಎಲ್ಲ ಚಿಂತನೆ, ಬರಹ ಮತ್ತು ಸಂವೇದನೆಯ ಮೂಲವಲ್ಲದೆ, ಅವರ ಆಕ್ಟಿವಿಸ್ಟ್ ಮತ್ತು 'ರಾಜಕೀಯ' ಚಿಂತನೆ, ಬರಹ ಹಾಗೂ ಸಂವೇದನೆಯ ಮೂಲ ಕೂಡ ಇರುವುದು ಅಲ್ಲಿ, ಆ ಆರ್ದ್ರತೆಯಲ್ಲಿ. ರಾಜಶೇಖರರಂಥ ಧೀಮಂತರ ವ್ಯಕ್ತಿತ್ವ, ನಡೆನುಡಿ, ಮತ್ತು ಸಂವೇದನೆಯ ಆ ಪಸೆಯ ಸೆಲೆ ಯಾವುದೆಂದು ಪರಿಕಿಸಿಕೊಳ್ಳುವುದು ಎಗ್ಗಿಲ್ಲದ ವ್ಯಾಪಾರೀ ಸಂಸ್ಕೃತಿ, ಫ್ಯಾಸಿಸ್ಟ್ ಸುಳ್ಳು ಮತ್ತು ಹಳವಂಡಗಳ ಈವತ್ತಿನ ಈ ಕಾಲದಲ್ಲಿ ಬಹಳ ಮುಖ್ಯವಾದದ್ದು. ಅದರಿಂದ, ನಮ್ಮ ಕಾಲದ ದೊಡ್ಡ ಮನಸ್ಸು ಮತ್ತು ದೊಡ್ಡ ಜೀವವೊಂದನ್ನು ರೂಪಿಸಿದ ದೊಡ್ಡ ಮನಸ್ಸು ಮತ್ತು ದೊಡ್ಡ ಜೀವಗಳೆಂಥವು ಅನ್ನುವುದು ನಮಗೆ ಮನವರಿಕೆಯಾಗುತ್ತದೆ; ಅಂಥ ಮನಸ್ಸು ಮತ್ತು ಜೀವಗಳು ಲೋಕಕ್ಕೆಷ್ಟು ಬೇಕಾದುವು ಅನ್ನುವುದು ಇನ್ನಷ್ಟು ಮನಮುಟ್ಟುತ್ತದೆ.

ಎಲ್ಲಿಂದ ಬಂತು ಆ ಆರ್ದ್ರತೆ? ಅದನ್ನು ಪೋಷಿಸಿ, ಬೆಳೆಸಿದ್ದು, ರಾಜಶೇಖರರ ಸಂವೇದನೆಯನ್ನು ಅವರ ಜೀವನದುದ್ದಕ್ಕೂ ಹದ ಮಾಡುತ್ತಹೋದದ್ದು ಯಾವುದು? ಸ್ವತಃ ರಾಜಶೇಖರರು ಯಾವುದರಿಂದಾಗಿ ತಮ್ಮನ್ನು ತಾವು ಹಾಗೆ ಹದ ಮಾಡಿಕೊಳ್ಳುತ್ತಹೋದರು? ಅವರು ಬರೆದದ್ದನ್ನು 1975ರಿಂದ ಶುರುಮಾಡಿಕೊಂಡು ಓದುತ್ತ ಬಂದು, ಬಳಿಕ, ಎಂಬತ್ತರ ದಶಕದ ಆರಂಭದಿಂದ ಅವರೊಡನೆ ಸಂವಾದ ನಡೆಸುತ್ತ, ಆಗೀಗ ಅದೇ ಕೆಲಸವಾಗಿ ಅವರನ್ನು ಮುದ್ದಾಂ ಕಾಣಲು ಹೋಗಿ ಕಳೆದ ಗಳಿಗೆಗಳನ್ನು ಬಿಟ್ಟರೆ, ದೂರದಿಂದಲೇ ಅವರೊಡನೆ ಆಪ್ತವಾಗಿ ಒಡನಾಡುತ್ತ ಬಂದವನಾಗಿ ನನಗೆ ತೋರುವ ಉತ್ತರ ಈ ಕೆಳಗಿದೆ.

ರಾಜಶೇಖರರ ಸಂವೇದನೆ ಮೂಲಭೂತವಾಗಿ ಸಾಹಿತ್ಯಿಕವಾದದ್ದು; ಸಾಹಿತ್ಯಿಕವಾದ ಸಂವೇದನೆಗಳಲ್ಲಿ ಅತ್ಯುತ್ತಮಮಟ್ಟದ್ದು. ಅವರ ತಂದೆ ವಿಷ್ಣು ಅಯ್ಯ ಮಣಿಪಾಲ ಜೂನಿಯರ್ ಕಾಲೇಜಿನಲ್ಲಿ ಇಂಗ್ಲಿಷ್



ಉಡುಪಿ ಜಿಲ್ಲೆಯ ಗುಂಡ್ಮಿಯಲ್ಲಿ ಜನಿಸಿದ ಜಿ. ರಾಜಶೇಖರ್, 'ಎಲ್ಐಸಿ'ಯ ನಿವೃತ್ತ ಉದ್ಯೋಗಿ. ಶಿಕ್ಷಕರಾಗಿಯೂ ಕೆಲ ಕಾಲ ಕೆಲಸ ಮಾಡಿದ್ದ ಅವರು, ತಮ್ಮ ಜೀವನದುದ್ದಕ್ಕೂ ಮಾತು–ಕೃತಿಗಳ ಮೂಲಕ ಮಾಡಿದ್ದು ಮೇಷ್ಟ್ರು ಕೆಲಸವನ್ನೇ. ಕೋಮುವಾದಕ್ಕೆ ವಿರೋಧ ಸೇರಿದಂತೆ ನಾಡಿನ ಸಮಕಾಲೀನ ತುರ್ತುಗಳಿಗೆ ತೀವ್ರವಾಗಿ ಪ್ರತಿಕ್ರಿಯಿಸುತ್ತಿದ್ದ ಅವರು, ವಿಮರ್ಶಕನ ನಿಷ್ಠುರತೆ, ಒಳನೋಟ ಮತ್ತು ವಿನಯವನ್ನು ಒಳಗೊಂಡಿದ್ದರು. ಸಮಾಜದ ಅಂತರಂಗದಲ್ಲಿನ ಅಂತರ್ಜಲ ಶೋಧಕ್ಕೆ ಅವರ ಇಡೀ ಬದುಕು ಮುಡಿಪಾಗಿತ್ತು. 'ಬಹುವಚನ ಭಾರತ' ಮತ್ತು 'ಕಾಗೋಡು ಸತ್ಯಾಗ್ರಹ' ಜಿ.ಆರ್. ಅವರ ವ್ಯಕ್ತಿತ್ವದ ಕಿಡಿಗಳಿಗೆ ಕನ್ನಡಿಯಂತಿರುವ ಕೃತಿಗಳು. ರಾಜಶೇಖರರು ನಡೆದ ದಾರಿ ಮತ್ತು ಕಟ್ಟಿಕೊಟ್ಟ ವಿಚಾರಧಾರೆ ಸಹೃದಯರ ಮನಸ್ಸಿನಲ್ಲಿ ಬಹುಕಾಲ ಉಳಿಯುವಂತಹದ್ದು